ನೌಕರೀಲಿ ಇದೀಯಾ ಅಂತ ಮನೇಗಂಟ ಬಿಡ್ಕೊಂಡ್ವಿ. ಸ್ವಲ್ಪ ಸುಮಾರಾಗಿದ್ದಾಳೆ ಅಂತ ನಮ್ ಕೂಸನ್ನೇ ಜರೀತೀಯಾ? ಉಳುದ್ರೆ ಇವಳನ್ನ ಮಗಳಲ್ಲ ಮಗಾ ಅಂತ ಸಾಕ್ತೀನಿ ಎದ್ದು ಹೋಗ್ರೋ ಆಚ್ಗೆ" ಎಂದು ಸಬ್ ರಿಜಿಸ್ಟ್ರಾರ್ ಕುರ್ಚಿಯ ಕಾಲಲ್ಲಿ ತಳ್ಳಿ ಅಬ್ಬರಿಸಿ ನಿಂತು ಬಿಟ್ಟರು. ಇದಿನ್ನೂ ಆಗದ ಮಾತೆಂದು ತಾಯಿ ಮಗಾ ಎದ್ದಾಗ ಬ್ರೋಕರ್ ಗವೀಶಯ್ಯ ಕೈಮುಗಿದು ಹೊರಟೇ ಹೋದನು.

ಅಲ್ಲಿಂದ ಗುಡ್ಡಪ್ಪ ಕನ್ಯಾ ನೋಡುವ ಕೆಲಸ ಆಪ್ತ ಗೆಳೆಯರಿಗೆ ವಹಿಸಿದನು. ದಮ್ಮು ಕಟ್ಟಿ ಎಲ್ಲರೂ ಹುಡುಕಾಡ ಹತ್ತಿದರು. ಗುಡ್ಡಪ್ಪ ಸ್ನೇಹಿತರ ಜೊತೆ ಮಾತಾಡಿಕೊಂಡು ಒಂದು ಸಿಂಬಾಲಿಕ್ ಒಡಂಬಡಿಕೆ ರೂಪಿಸಿದನು. ಅದರಂತೆ ಹೆಣ್ಣಿನ ಮನೆಗೆ ಹೋದಾಗ ಒಪ್ಪಿಗೆ ಇದೆಯೋ ಇಲ್ಲವೋ ಎಂದು ಎಲ್ಲರೆದುರು ಹೇಳಿ ಅಭಾಸ ಆಗುವುದು ಬೇಡ. ಬಾಯಿಬಿಟ್ಟು ಇದ್ದದ್ದು ಇದ್ದಂಗೆ ಹೇಳಿ ಬಹಳ ಕಡೆ ಅವಮಾನವಾಗಿದೆ. ಹೀಗಾಗಿ "ನಾನು ಉಪ್ಪಿಟ್ಟು ತಿಂದು ಚಾ ಕುಡಿದ್ರೆ ಕನ್ಯಾ ಒಪ್ಪಿಗೆ ಇಲ್ಲಾಂತ ಅರ್ಥ. ಅವರು ಕೊಟ್ಟ ಸ್ವೀಟ್ ಕೂಡ ತಿಂದ್ರೆ ಕನ್ಯೆ ಇಷ್ಟಾಂತ ಲೆಕ್ಕ. ಇದನ್ನ ನೀವು ತಿಳ್ಕಂಡ್ರೆ ಸಾಕು. ಮತ್ತೆ ಎಲ್ಲರೆದುರು ಒಪ್ಪಿಗೇನಾ ಅಂತ ಕೇಳಿ ಮಾನ ಮರ್ಯಾದಿ ಕಳೀಬ್ಯಾಡ್ರಿ" ಎಂದು ಸೂಚಿಸಿದನು. ಪ್ರತಿ ಶನಿವಾರ ಭಾನುವಾರದ ರಜಾ ದಿನ ಗುಡ್ಡಪ್ಪನ ಗೆಳೆಯರಿಗೆ ಇದೇ ಕೆಲಸ ಕಾಯಮ್ಮಾಯಿತು. ಅಲ್ಲೀತನಕ ಮನೆಯ ಒಂದು ಚೀಲ ತೆಂಗಿನ ಕಾಯಿ ವೇಸ್ಟ್ ಆಗಿದ್ದವು. ಹಣ್ಣು ಹೂವು ಖರೀದಿ ಅಭ್ಯಾಸವಾಗಿ ಹೋಗಿತ್ತು. ನಲವತ್ತೆರಡು ಮನೆ ಹೊಕ್ಕಾಡಿದ ಮೇಲೆ ಹೊನ್ನಾಳಿ ಕಡೆ ಮೇಷ್ಟ್ರೊಬ್ಬರ ಮನೆಯಲ್ಲಿ ಕೊನೇ ಹುಡುಗಿ ಬಾಕಿ ಉಳಿದಿರುವ ವಿಷಯ ಪತ್ತೆಯಾಯಿತು.

ಸ್ನೇಹಿತರ ಜೊತೆ ಹೋಗಿ ಹುಡುಗಿ ನೋಡಿದ್ದೂ ಆಯಿತು. ಗುಡ್ಡಪ್ಪ ಉಪ್ಪಿಟ್ಟು ಮಾತ್ರ ತಿಂದ. ಇದರಿಂದ ಗೆಳೆಯರು ಮುನಿಸಾದರು. "ಇನ್ನು ನಮ್ಮ ಕೈಲೂ ನಿನಗೆ ಮದ್ವೆ ಮಾಡ್ಸಕ್ಕೆ ಆಗಲ್ಲ. ಸುಮ್ಮನೆ ಈ ಹುಡುಗೀನ ಒಪ್ಕೊ.ಇಲ್ಲ ಮೆಟ್ಟು ತೆಗೆದು ಬಾಯಿಗೆ ಇಡ್ತೀವಿ. ಏನ್ ತಮಾಷಿ ಮಾಡ್ತಿದ್ದೀಯಾ ಲೋಫರ್" ಎಂದು ಜಗಳಕ್ಕೆ ನಿಂತರು. ಗುಡ್ಡಪ್ಪನೂ ಇವತ್ತು ಸಾಕಾಗಿ ಹೋಗಿದ್ದ. ಮಿತ್ರರ ಮಾತಿಗೆ ಎದುರಾಡುವ ಧೈರ್ಯ ಅವನಲ್ಲಿ ಉಳಿದಿರಲಿಲ್ಲ. ಈ ಮನೆಗೆ ಬಂದ ಮೇಲೆ ತನ್ನಾಪ್ತ ದೋಸ್ತಿ ಘನಶ್ಯಾಮ ಪೂರಾ ಉಲ್ಟಾ ಆಗಿ ಹೋಗಿದ್ದ. ಹುಡುಗಿ ಮನೆಯವರು ಇವನ ದೂರದ ನೆಂಟರು ಎಂಬುದೂ ಗೊತ್ತಾಗಿ ಕನ್ಯೆಯ ಅಪ್ಪನ ಜೊತೆ ಅವನು ಕಸ್ಸಾ ಪುಸ್ಸಾ ಮಾತಾಡಿಕೊಂಡು ತೀರಾ ಹತ್ತಿರವಾಗಿ ಹೋಗಿದ್ದ. ಮೇಲಾಗಿ ಭಾವುಕನಾಗಿದ್ದ. ಅವನ ವರಸೆಯೂ ವಿಚಿತ್ರವಾಗಿ ಬದಲಾಗಿ ಅಚ್ಚರಿ ಹುಟ್ಟಿಸತೊಡಗಿತು. ಶ್ಯಾಮ ದೆವ್ವ ಮೆಟ್ಟವನಂತೆ ಬದಲಾಗಿ ಹೋಗಿದ್ದ.

"ನೀನು ಇದೇ ಮನೇಲಿ ನೆಂಟಸ್ತನ ಮಾಡಬೇಕು ಕಣೋ. ಅವ್ರು ನಮ್ ಹತ್ತಿರದ ಸಂಬಂಧಿಕರಂತೆ" ಎಂದು ಹಟ ಹಿಡಿದನು. ''ಲೇ ನೀನ್ ಬರೋತಂಕ ನನ್ ಕಡೀಕಿದ್ದೆ. ಅದ್ಯಾವ ಮಾಯದಲ್ಲಿ ಅವರ ಕಡಿ ಸೇರ್ಕೊಂಡೋ ಹಲ್ಕಟ್ ನನ್ಮಗನೆ. ನೀನ್ ನೋಡಿದ್ರೆ ಗೌಡ್ರೋನು. ಅವ್ರು ನಮ್ ಕುರುಬರ ಪಿಳ್ಳೆ, ಅದ್ಯಾವ ಲೆಕ್ಕದಲ್ಲಿ ನೀ ಆ ಕಂಬಳೀಗೆ ನೆಂಟನಾಗ್ತಿಯೋ ಬದ್ಮಾಶ್. ಅವನೇನಾರಾ ಒಳಗೆ ಕರೆದು ಎಣ್ಣೇಪಣ್ಣೇ ಹೊಡೆಸಿದನೇನೋ, ಹೆಂಗೆ?" ಎಂದು ಗುಡ್ಡಪ್ಪ ಗುರಾಯಿಸಿದನು. "ಆ ಸೀಕ್ರೆಟೆಲ್ಲಾ ಈಗ ಹೇಳಕ್ಕಾಗಲ್ಲ ನೀನು ಆಗಲೇಬೇಕಂದ್ರೆ ಆಗ್ಲಿಕ್ಕೇ ಬೇಕು. ನಾ ನಿನ್ನ ದೋಸ್ತಾ ಅಲ್ಲವಾ, ನನ್ ಮಾತಿಗೆ ಮರ್ವಾದೀನೆ ಇಲ್ವಾ?" ಎಂದು ಬಲವಂತಕ್ಕೆ ನಿಂತನು. ಇವತ್ತು ತಪ್ಪಿಸಿಕೊಳ್ಳಲಾಗದ ಗುಡ್ಡಪ್ಪ ಒದ್ದಾಡತೊಡಗಿದ.